# ಸಾಂಸ್ಕೃತಿಕ ಭಾವೈಕ್ಯತೆ ಮೂಡಿಸಿದ ಬಾಂಬೆ ಕರ್ನಾಟಕದ ಬಾಗೇನಾಡು

**ಬಸವರಾಜ ಕೊಕಟನೂರ**
ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬಿ.ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ.

DOI: https://doi.org/10.5281/zenodo.17295971

## ABSTRACT:

ಬೆಳಗಾವಿ ಜಿಲ್ಲೆಯ ತಾಲೂಕು ಕೇಂದ್ರವಾಗಿದ್ದು, ಇಂದಿನ ರಾಯಬಾಗ ಕ್ಷೇತ್ರವಾಗಿದೆ. ಪ್ರಾಚೀನ ಕರ್ನಾಟಕದಲ್ಲಿ ಇದನ್ನು 'ಕುಂತಣ ಬಾಗೇ', 'ಕುಹುಂಡೇ ಮಂಡಲದ' ಒಂದು ಭಾಗವಾಗಿತ್ತು. ಇದನ್ನು ತೆಂಕಣಬಾಗೆ ಎಂದು ಗುರುತಿಸುವರು. ಕ್ರಮೇಣ ಪೋವಿನಬಾಗೇ, ಪೋಬಾಗೆ, ಬಾಗೆ ಘೋಬಾಗೆ, ಬಾಗಿ ಎಂದು ಹೆಸರು ಬದಲಿಸಿಕೊಂಡಿತು. ಜನರ ಬಾಯಲ್ಲಿ ಇವತ್ತಿಗೆ ರಾಯಬಾಗ ಎಂದು ಕರೆದರು. ಇಂದಿಗೂ ಈ ಪರಿಸರವನ್ನು ಬಾಗೇನಾಡು ಎಂದು ಕರೆಯುವುದು ರೂಢಿ ಇದೆ. ಇದು ಪ್ರಾದೇಶಿಕವಾಗಿ ರಾಯಬಾಗ ಸ್ಥಳವನ್ನು ಹೊಂದಿದ್ದು, ತನ್ನದೇ ಆದ ಇತಿಹಾಸವನ್ನು ಸಾರುತ್ತದೆ. ಇಲ್ಲಿ ಅನೇಕ ಆದಿ ಮಾನವನ ನೆಲೆಗಳು ಕಂಡು ಬಂದಿದ್ದು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ನಂತರದಲ್ಲಿ ಬಹುಮನಿ ಸುಲ್ತಾನರು, ಮರಾಠರು ಹೀಗೆ ಅನೇಕ ರಾಜಮನೆತನಗಳು ಸಂಸ್ಥಾನಗಳು ಆಳಿದ ನಾಡು.

## KEYWORDS:

ಬಾಗೇನಾಡು, ಬೂದಿದೀಪ, ಮೊಹರಂ, ದಲಿತ, ಚೌಡಕಿ.

**ಪೀಠಿಕೆ**

ಬಾಗೇನಾಡು ಎಂಬುವುದು ಸಾಂಸ್ಕೃತಿಕ ಸಮನ್ವಯತೆಯ ಹಾಗೂ ಜಾತ್ಯಾತೀತದ ನಾಡಾಗಿದ್ದು, ಹಲವಾರು ಧಾರ್ಮಿಕ ಆಚರಣೆಗಳಿದ್ದರೂ ಮಾನವ ಜನಾಂಗ ಒಂದು ಎಂಬ ಭಾವದಿಂದ ಬಾಂಬೆ-ಕರ್ನಾಟಕದಲ್ಲಿ ಪ್ರತಿಬಿಂಬಕವಾಗಿದೆ. ಈ ನಾಡಿನಲ್ಲಿ ಹಲವಾರು ಕವಿಗಳು ತಮ್ಮದೇ ಆದ ನಾಡಿನ ಇತಿಹಾಸವನ್ನು ಪ್ರತಿಬಿಂಬಿಸುತ್ತಿದ್ದಾರೆ. ಪ್ರಾಚೀನದಿಂದ ಆಧುನಿಕದವರೆಗೆ ಚರಿತ್ರೆಯನ್ನು ಹೊಂದಿದ್ದು, ಹಲವಾರು ರಾಜರು ಹಾಗೂ ಮುಸ್ಲೀಮ, ಮರಾಠಾ, ಬ್ರಿಟಿಷ್ ಆಡಳಿತವನ್ನು ಈ ನಾಡು ಕಂಡಿದೆ. ಕರ್ನಾಟಕದ ಏಕೀಕರಣದ ನಂತರ ಒಂದು ತಾಲೂಕಿನ ಸ್ಥಾನವನ್ನು ಪಡೆದಿದ್ದು, ಕಾಲ ಬದಲಾದಂತೆ ತನ್ನ ಆಡಳಿತದ ಘಟ್ಟವನ್ನು ವಿಸ್ತರಿಸಿಕೊಂಡಿದ್ದು ತನ್ನ ಸಂಸ್ಕೃತಿ-ಚರಿತ್ರೆ ಮುಂದಿನ ಪೀಳಿಗೆಗೆ ಪ್ರತಿಬಿಂಬದಂತೆ ಪ್ರೇರೇಪಿಸುತ್ತದೆ. ಪೂವಿನ ಬಾಗೆ ಪ್ರಾಚೀನ ಕಾಲದಲ್ಲಿ ಜೈನ ಕೇಂದ್ರವಾಗಿದ್ದು, ಸಾಂಸ್ಕೃತಿಕ ಪರಂಪರೆಯ ತೊಟ್ಟಿಲು ಈ ನಾಡಾಗಿದೆ. ಇಲ್ಲಿ ಅನೇಕ ಧರ್ಮಿಯರು, ಅನೇಕ ದೈವಗಳು, ಅನೇಕ ಸಾಂಸ್ಕೃತಿಕ ಆಚರಣೆಗಳು, ಹಬ್ಬ-ಹರಿದಿನಗಳು, ಉತ್ಸವಗಳನ್ನು ನೋಡಿದರೆ ಈ ನಾಡಿನ ಚರಿತ್ರೆ, ವೈವಿಧ್ಯತೆ ನಮಗೆ ಎದ್ದು ಕಾಣುತ್ತದೆ.

ಇಲ್ಲಿ ಪ್ರಾಚೀನ ಶಾಸನಗಳು ಸಿಕ್ಕಿದ್ದು, ಕೃಷ್ಣಾ ನದಿಯ ದಡದಲ್ಲಿ ಅನೇಕ ಅವಶೇಷಗಳನ್ನು ಕಾಣುತ್ತೇವೆ. ಕುಡಚಿ ಮತ್ತು ಚಿಂಚಲಿಯ ಬೂದಿದೀಪ (ಬೂದಿ ದಿಬ್ಬ) ಪತ್ತೆಯಾಗಿದ್ದು, ಜಲಾಲಪೂರ, ಕುಡಚಿ, ಚಿಂಚಲಿ, ಖೇಮಲಾಪೂರ ಮುಂತಾದ ನದಿ ತಟದ ಗ್ರಾಮಗಳು ಇತಿಹಾಸ ಪೂರ್ವ ಕಾಲದಿಂದಲೂ ಅಸ್ತಿತ್ವದಲ್ಲಿವೆ. 10-11ನೇ ಶತಮಾನದಿಂದಲೂ ಈ ಪ್ರದೇಶವನ್ನು ಉಲ್ಲೇಖಿಸುವ ಅನೇಕ ಶಾಸನಗಳು ಸಿಕ್ಕಿವೆ. ಆದರೆ

ಪೂವಿನಬಾಗೆಯ ಸುಂದರ ಚಿತ್ರಣವನ್ನು ನೀಡಿದವರು ಕವಿ ರಾಜಾಧಿತ್ಯ.

**ರಾಜಾಧಿತ್ಯನ ಜನ್ಮಸ್ಥಳ**

ಕವಿ ರಾಜಾಧಿತ್ಯ ಕನ್ನಡದ ಗಣಿತ ಬ್ರಹ್ಮ, ಗಣಿತ ಭಾಸ್ಕರ. ಕನ್ನಡಕ್ಕೆ ಮೊದಲು ಗಣಿತ ಶಾಸ್ತ್ರವನ್ನು ನೀಡಿದ ಕೀರ್ತಿ ಈತನದು. ಈತನ ಕಾಲ 12ನೇ ಶತಮಾನ (1190). ಪೂವಿನ ಬಾಗೆ ಅವನ ಜನ್ಮಸ್ಥಳ. ವ್ಯವಹಾರ ಗಣಿತ, ಕ್ಷೇತ್ರ ಗಣಿತ, ವ್ಯವಹಾರ ರತ್ನ, ಲೀಲಾವತಿ, ಚಿತ್ರಹಸುಗೆ, ಜೈನ ಗಣಿತ ಸೂತ್ರ, ಟೀಕೋದಾಹರಣ ಮೊದಲಾದ ಗಣಿತ ಗ್ರಂಥಗಳನ್ನು ರಚಿಸಿರುವ ರಾಜಾಧಿತ್ಯ ಜೀನಧರ್ಮದ ಕವಿ. ಇವನಿಗೆ ರಾಜವರ್ಮ, ಭಾಸ್ಕರ, ಭಾಚ, ಬಾಚಯ್ಯ, ಬಾಚಿರಾಜ ಎಂಬ ಹೆಸರುಗಳು ಮುಂತಾದ ಬಿರುದುಗಳು ಇದ್ದವು. ರಾಜಾಧಿತ್ಯ ತನ್ನ ಕೃತಿಗಳಲ್ಲಿ ಕೆಲವೊಂದು ಕಡೆ, ವಿಷ್ಣುನೃಪಾಲನ ಹೆಸರು ಉಲ್ಲೇಖಿಸಿದ್ದಾನೆ. ಕವಿ ತನ್ನ ಆತ್ಮೇಶ್ವರರು ಎಂದು ಹೇಳಿಕೊಂಡಿರುವ ಭರತ, ಬಾಹುಬಲಿ, ಎರಡನೇ ಬಲ್ಲಾಳ, ದಂಡನಾಯಕರು ಇವರ ಆಶ್ರಯದಲ್ಲಿದ್ದಿರಬೇಕೆಂಬುದು ಇದರ ವಿಚಾರ.

12ನೇ ಶತಮಾನದ ರಾಜಾಧಿತ್ಯನನ್ನು ಹೊರತುಪಡಿಸಿ, ಅನೇಕ ಸಣ್ಣ ಪುಟ್ಟ ಕವಿಗಳು ಕಂಡುಬರುವರು. ಬಾಗೇನಾಡು ಜಾನಪದದ ಕಣಜ, ಸಂಶೋಧನೆಯ ಕಣ್ಣು. ಅಗೆದಷ್ಟು ಜಾನಪದದ ಸಿರಿ ಹೊರಬರುವುದು. ಇಲ್ಲಿ ಜನಪದ ಕವಿ, ಕಲಾವಿದರು, ಹಾಡುಗಾರರು, ಅನೇಕ ಸಾಂಸ್ಕೃತಿಕ ಆಚರಣೆಗಳು, ವೈವಿಧ್ಯಮಯ ಸಾಂಸ್ಕೃತಿಕ ಸಂಪತ್ತಿನ ತವರೂರಾಗಿದೆ.

**ಸಾಮರಸ್ಯ**

ಇಲ್ಲಿನ ಜನರು ಕೃಷಿ ಪ್ರಧಾನ ಜೀವನವನ್ನು ಹೊಂದಿದ್ದು, ಅನೇಕ ನೃತ್ಯಗಳು, ಗೀತೆಗಳು, ಪುರಾಣಗಳು, ಸಂಪ್ರದಾಯಗಳು, ಮೂಢನಂಬಿಕೆಗಳು, ವಿಭಿನ್ನ-ವಿಭಿನ್ನ ಜಾತ್ರೆಗಳು ಇಲ್ಲಿನ ಸಾಂಸ್ಕೃತಿಕ ಪರಂಪರೆಗೆ ಹೆಸರುವಾಸಿಯಾಗಿದೆ. ಆದಿಮಾನವನಿಂದ ಆಧುನಿಕ ಮಾನವನವರೆಗೆ, ಅನೇಕ ಮಜಲುಗಳನ್ನು ಹೊಂದಿದೆ. ಹಲವು ಸಂಸ್ಕೃತಿಗಳ ಸಂಗಮವಾಗಿದೆ. ಜೈನ್, ಲಿಂಗಾಯತ, ಹಾಲುಮತ, ಮರಾಠ, ಮುಸ್ಲಿಂ, ದಲಿತ ಮುಂತಾದ ಹಲವು ಸಮುದಾಯಗಳು ಸಾಮರಸ್ಯದಿಂದ ಬದುಕುತ್ತಲೇ ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಕಾಪಾಡಿಕೊಂಡು ಬಂದಿವೆ. ಪ್ರತಿಯೊಂದು ಸಮುದಾಯವೂ ತನ್ನದೇ ಆದ ಸಿರಿ ಸಂಪತ್ತನ್ನು ಹೊಂದಿದೆ. ಜೈನರು ಜೀನ ಭಜನೆ, ಲಿಂಗಾಯತರು ಶಿವ ಭಜನೆ, ಹಾಲುಮತದವರು ಡೊಳ್ಳಿನ ಭಜನೆ, ಮರಾಠರು ಕನ್ನಡದ ಅಭಂಗ ಕೀರ್ತನೆ, ಮುಸ್ಲಿಮರು ಮೊಹರಂ ಹಾಡು, ದಲಿತರ ಹಾಡು, ಗೀತೆ, ನೃತ್ಯ ಕಲೆ, ಕರಕುಶಲತೆ ಮುಂತಾದವುಗಳು ಇಲ್ಲಿ ಕಂಡುಬರುತ್ತವೆ. ಇಲ್ಲಿ ಸಿದ್ಧ ಪರಂಪರೆಯಂತೂ ವಿಶಿಷ್ಟವಾಗಿ ಕಂಡುಬರುತ್ತದೆ. ಕರಿಸಿದ್ಧ, ಭೂತಾಳಸಿದ್ಧ, ರೇವಣಸಿದ್ಧ, ಮಲಕಾರಿ ಸಿದ್ಧ ಮುಂತಾದ ಸಿದ್ಧರ ಆರಾಧನೆಯ ಸಿದ್ಧ ಪರಂಪರೆಯಿದೆ.

ಈ ನೆಲೆಯಲ್ಲಿ ಬೆಳೆದು ಬಂದ ಸಾಹಿತ್ಯ, ಆಚರಣೆಗಳ ಫಲವಾಗಿ ಮೂಡಿಬಂದ ಜನಪದ ಕಲೆ-ಕಲಾವಿದರು ಅನೇಕ ಜನ ಸಿಗುತ್ತಾರೆ. ನಾಗರಿಕ ಬದುಕಿನಲ್ಲಿ ಏನೆಲ್ಲಾ ಕಲೆಗಳಿವೆಯೋ ಅವು ಸಾಂಸ್ಕೃತಿಕ ಪರಂಪರೆಯ ಮೂಲವಾಗಿವೆ. ಮಾನವನ ಸಂಸ್ಕೃತಿ, ಸಮಗ್ರ ತಿಳುವಳಿಕೆಗೆ ವಿಶ್ವಮಾನವೀಯವಾಗಿ ವೈಜ್ಞಾನಿಕ ಪ್ರಗತಿಯಿಂದ ಯಂತ್ರ ನಾಗರೀಕತೆಯ ರೂಪದಲ್ಲಿ ಯೂರೋಪಿನಾದ್ಯಂತ ವೈಚಾರಿಕ ಕ್ರಾಂತಿಯ ಚಂಡಮಾರುತ ಬೀಸಿದಂತೆ ವಿಚಾರ, ಸಾಹಿತ್ಯ, ಮೌಲ್ಯಗಳೆಲ್ಲವೂ ಇಲ್ಲಿ ಬೆಳೆದು ಬಂದಿದೆ. ಹಾರೂಗೇರಿಯ ಕವಿ ಅಲಬೈರಿ ಈ ಭಾಗದ ಸುಪ್ರಸಿದ್ಧ ಜನಪದ ಕವಿ. ಭಜನೆ, ಅಭಂಗ, ಲಾವಣಿ, ಚೌಡಕಿ ಹಾಡು, ಡೊಳ್ಳಿನ ಪದ, ಬಯಲಾಟಗಳನ್ನು ರಚಿಸಿರುವ ಅಲಬೈರಿ ತತ್ವಪದಗಳು ಶಿಶುನಾಳ ಶರೀಫರು,

ಕಡಕೋಳದ ಮಡಿವಾಳ ಸ್ವಾಮಿಯನ್ನು ನೆನಪಿಸುತ್ತವೆ. ಇಲ್ಲಿ ಅನೇಕ ತತ್ವಪದಗಳನ್ನು ರಚಿಸಿದ ಕವಿಗಳು ಹಾಗೆಯೇ ಜಾನಪದ ಸಾಹಿತ್ಯಕ್ಕೆ ಅನೇಕ ಕೊಡುಗೆ ನೀಡಿದ ಕವಿಗಳನ್ನು ಬಾಗೇನಾಡಿನ ಜಾನಪದ ಕವಿಗಳು ಎಂಬ ಗ್ರಂಥದಿಂದ ತಿಳಿದು ಬರುತ್ತದೆ. ಡೊಳ್ಳಿನ ಮೇಳಗಳು ಈ ನಾಡಿನಲ್ಲಿ ಪ್ರಸಿದ್ಧ. ಅನೇಕರು ಮೊಹರಂ ಹಾಡುಗಳ ಗಾಯಕರಾಗಿದ್ದಾರೆ. ಅನೇಕ ಕಲಾವಿದರಿದ್ದಾರೆ. ಬಯಲಾಟದ ನಟರಿದ್ದಾರೆ. ಖಣಿ, ಹಲಗೆ, ತಾಸೆ ಮುಂತಾದ ವಾದ್ಯಗಳ ವಾದಕರಿದ್ದಾರೆ. ಪ್ರತಿಯೊಂದು ಊರಿನಲ್ಲಿ ಅನೇಕ ದೇವರ ಗುಡಿಗಳಿದ್ದು, ಚಿಂಚಲಿ ಮಾಯಕ್ಕನ ಜಾತ್ರೆ, ರಾಯಬಾಗದ ಮೊಹರಂ ಜಾತ್ರೆ ಮತ್ತು ದನಗಳ ಜಾತ್ರೆ, ಅನೇಕ ಮಠ-ಮಾನ್ಯಗಳ ಉತ್ಸವಗಳು, ಸಮ್ಮೇಳನಗಳು ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ತೀವ್ರಗತಿಯಲ್ಲಿವೆ.

**ಧಾರ್ಮಿಕ ಸಮನ್ವಯತೆ**

ದೈವಾರಾಧನೆ, ವೃತ್ತಿ ಕಲೆಗಳು, ಮನರಂಜನೆ ಕಲೆಗಳು, ರಂಗಕಲೆಗಳು ಸಂಕೀರ್ಣವಾಗಿ ವೈವಿಧ್ಯತೆಯಿಂದ ಬೆಳೆದು ಬಂದಿವೆ. ಇಲ್ಲಿನ ಕೆಲವೊಂದಿಷ್ಟು ಪ್ರದೇಶದಲ್ಲಿ ಮೂಢನಂಬಿಕೆಗಳಿಗೆ ಸಂಬಂಧಿಸಿದಂತೆ ಅನೇಕ ಆಚರಣೆಗಳು ಕಂಡು ಬರುತ್ತದೆ. ಉದಾಹರಣೆಗೆ ದೇವದಾಸಿ ಪದ್ಧತಿ, ಮಾಟ ಮಾಡುವುದು, ದೇವರು ಬರುವ ಪದ್ಧತಿಗಳು ತೀವ್ರವಾಗಿ ಕಂಡುಬರುತ್ತದೆ. ಸಾಂಸ್ಕೃತಿಕವಾಗಿ ಮುಂದುವರಿದ ಪ್ರದೇಶವಾಗಿದ್ದರೂ, ಮೂಢನಂಬಿಕೆಯು ಹಿಂದುಳಿದ ಪ್ರದೇಶಕ್ಕೆ ಕಾರಣವಾಗಿದೆ. ಬಾಗೇನಾಡು ವಿವಿಧ ಸಮುದಾಯಗಳ ಸಂಗಮವಾದ್ದರಿಂದ ವೈವಿಧ್ಯತೆಗೆ ಕಾರಣವಾಗಿದೆ. ಅನೇಕ ಹಳ್ಳಿಗಳ ನಾಡಾದ್ದರಿಂದ ಹಳ್ಳಿಗಳ ಸಂಪ್ರದಾಯ ವಿಶಿಷ್ಟವಾಗಿದೆ. ಈ ನಾಡಿನಲ್ಲಿ ಬೆಟ್ಟ-ಗುಡ್ಡ, ವಿವಿಧ ಗಿಡಗಳು ಹೆಚ್ಚಾಗಿದ್ದರಿಂದ ಕುರಿ ಸಾಕಾಣಿಕೆ, ಪಶುಸಂಗೋಪಣೆ, ಕೃಷಿ ಪ್ರಧಾನ ನಾಡಾಗಿದೆ. ಇಲ್ಲಿನ ಮಣ್ಣು ಕೆಂಪು ಮತ್ತು ಕಪ್ಪು ಮಣ್ಣಿನ ಸಂಗಮವಾಗಿದೆ. ಕೃಷ್ಣಾ ನದಿ ಈ ನಾಡಿಗೆ ಜೀವನಾಡಿ ಆಗಿದೆ. ಹಿಡಕಲ್ ಜಲಾಶಯದ ಎಡದಂಡೆ ಕಾಲುವೆ ನೀರು 5 ಹೆಕ್ಟೇರಿಗಿಂತ ಹೆಚ್ಚಿನ ಭೂಮಿಯನ್ನು ಹಸಿರಾಗಿರಿಸಿದೆ.

ಭೌಗೋಳಿಕವಾಗಿ ಬೆಳಗಾವಿ ಜಿಲ್ಲೆಯ ಆಗ್ನೇಯಕ್ಕೆ ಈ ಪ್ರದೇಶವಿದ್ದು, ಅನೇಕ ಚಿಕ್ಕ ಪುಟ್ಟ ಬೆಟ್ಟಗಳಿಂದ ಕೂಡಿದೆ. ಉದಾ: ಬ್ಯಾಕೂಡ ಗುಡ್ಡ, ರೇವಣಸಿದ್ಧನ ಬೆಟ್ಟ, ರಾಯಬಾಗದ ಗುಡ್ಡ, ಕುಡಚಿಯಲ್ಲಿ ಬೋಧಿ ಬೆಟ್ಟ ಹೀಗೆ ಅನೇಕ ಬೆಟ್ಟಗಳಿಂದ ಕೂಡಿದ ಈ ನಾಡು ಕೃಷ್ಣಾ ನದಿ, ಅಥಣಿ, ಕಾಗವಾಡ, ತೇರದಾಳ ಕ್ಷೇತ್ರಗಳನ್ನು ಬೇರ್ಪಡಿಸುತ್ತದೆ. ಸಾಂಸ್ಕೃತಿಕವಾಗಿ ಅನೇಕ ಜಾತ್ರೆಗಳು ನಡೆಯುತ್ತಿವೆ. ಚಿಂಚಲಿ ಮಾಯಕ್ಕನ ಜಾತ್ರೆ, ಕರಿಸಿದ್ಧನ ಜಾತ್ರೆ, ಭೂತಾಳಸಿದ್ದನ ಜಾತ್ರೆ, ಭೀರಪ್ಪನ ಜಾತ್ರೆ, ಹಾರೂಗೇರಿ ವೃಷಭೇಂದ್ರ ಅಜ್ಜನ ಜಾತ್ರೆ, ಮುಗಳಖೋಡದ ಯಲ್ಲಾಲಿಂಗ ಅಜ್ಜನ ಜಾತ್ರೆ ಪ್ರಮುಖವಾಗಿ ವಿಜೃಂಭಣೆಯಿಂದ ಜರುಗುತ್ತವೆ. ಮಾಯವ್ವನ ಜಾತ್ರೆಯಂತೂ ಕರ್ನಾಟಕ, ಮಹಾರಾಷ್ಟ್ರ ಭಕ್ತರ ಸಂಗಮವಾಗಿದೆ. ಇವಳನ್ನು ಬಣದ ಮಾಯವ್ವ ಎಂದು ಕರೆಯುವವರು. ಬೆಕ್ಕೇರಿ ಲಕ್ಷ್ಮೀದೇವಿ, ಸವಸುದ್ದಿ ಲಕ್ಕವ್ವ, ರಾಯಬಾಗ ಸ್ಟೇಷನ್ ಲಗಮವ್ವ ಈ ನಾಡಿನ ಇನ್ನಿತರ ಸ್ತ್ರೀದೇವತೆಗಳು ಈ ನಾಡಿನಲ್ಲಿ ಪ್ರಮುಖ ಸ್ಥಾನ ಹೊಂದಿವೆ.

ಜನಪದ ಮತ್ತು ಹಾಲುಮತದ ಪುರಾಣದಲ್ಲಿ ಬಾಗೇನಾಡು ಕುರುಬರ ಆರಾಧ್ಯದೈವ ಬೀರಪ್ಪನ ಆಡುಂಬಲ ಎಂದು ವರ್ಣಿತಗೊಂಡಿವೆ. ಚಿಂಚಲಿಯ ಮಾಯವ್ವನ ಉಡಿಯಲ್ಲಿ ಬೀರಪ್ಪ ಬೆಳೆಯುತ್ತಾನೆಂಬ ದೈವಿನಂಬಿಕೆಯನ್ನು ಹೊಂದಿದ್ದಾರೆ. ಮಾಯವ್ವ ಮೂಲತಃ

ದೇವಗಿರಿಯ ರಾಜನ ಮಗಳು. ಏಳು ಮಂದಿ ಮಕ್ಕಳಲ್ಲಿ ಕೊನೆಯ ಮಗಳಾಗಿ ಇವರು ಜನಿಸಿದ್ದರಿಂದ ಇವಳಿಗೆ ಬುದ್ಧಿಭ್ರಮಣೆ ಇತ್ತೆಂದು ಇವಳನ್ನು ಕಾಡಿಗೆ ಬಿಟ್ಟು ಹೋಗುತ್ತಾರೆ. ಅಲ್ಲಿ ಒಬ್ಬ ಋಷಿಮುನಿಯ ಕೈಯಲ್ಲಿ ಸಿಕ್ಕು ಅವಳ ವಿದ್ಯಾಭ್ಯಾಸದಿಂದ ದೈವಿ ಶಕ್ತಿಯನ್ನು ಪಡೆದುಕೊಂಡು ಕೊಂಕಣಕ್ಕೆ ಬರುವಳು. ಕೊಂಕಣದಿಂದ ಬಾಗಿಗೆ ಬಂದು ಬೂದಿ ದಿಬ್ಬದಲ್ಲಿ ಮರಕ್ಕೆ ತೊಟ್ಟಿಲಲ್ಲಿ ಆಡುತ್ತಿದ್ದ ಬೀರಪ್ಪನನ್ನು ನೋಡಿ ತಾನು ಅವನನ್ನು ಸಾಕಿದಳು. ಬಾಗಿಯ ಒಡೆಯ ಮಾಯವ್ವನ ಮೇಲೆ ಕಣ್ಣು ಹಾಕಿದ್ದರಿಂದ ಆ ಒಡೆಯನನ್ನು ಭೀರಪ್ಪ ಕೊಂದು ಮಾಯವ್ವನಿಗೆ ಪ್ರಶಸ್ತವಾಗಿರುವ ಸ್ಥಳವನ್ನು ಬಾಗೀಯಲ್ಲಿ ಒದಗಿಸಿಕೊಟ್ಟನೆಂಬ ಪ್ರತೀತಿ ಈ ನಾಡಿನಲ್ಲಿದೆ. ಅದಕ್ಕಾಗಿ ಮಾಯವ್ವನನ್ನು ಬಾಗೀಯ ಬಣದ ಮಾಯವ್ವ ಎಂದು ಕರೆಯುತ್ತಾರೆ. ಚಿಂಚಲಿ, ರಾಯಬಾಗ, ಬಿರಡಿ, ಆಲಖನೂರ ಈ ಭೀರಪ್ಪನಿಂದ ಹಲವಾರು ಹಾಲುಮತದ ಕಾವ್ಯಗಳು ಒಟ್ಟುಗೂಡಿ ಹಾಲುಮತದ ಪ್ರಭಾವ ಹೆಚ್ಚಾಗಿ ಇರುವುದನ್ನು ಬಿಂಬಿಸುತ್ತದೆ.

ಚಿಂಚಲಿಯ ದೇವಸ್ಥಾನಕ್ಕೆ ಕೊಂಕಣದ ಭಕ್ತರು, ಮಹಾರಾಷ್ಟ್ರದ ಭಕ್ತರು ಈ ದೇವಸ್ಥಾನಕ್ಕೆ ದೇಣಿಗೆಯನ್ನು ನೀಡಿ ದೇವಿಯ ಆಶೀರ್ವಾದವನ್ನು ಪಡೆಯುತ್ತಾರೆ. ಚಿಂಚಲಿ ಜಾತ್ರೆ ಸಾಂಸ್ಕೃತಿಕ ಅಧ್ಯಯನಕ್ಕೆ ವಸ್ತು ಆಗಬಲ್ಲದು. ಚಿಂಚಲಿ ಜಾತ್ರೆಯಲ್ಲಿ ದನಗಳ ಮಾರಾಟ ಮತ್ತು ಪ್ರದರ್ಶನ ನಡೆಯುತ್ತದೆ.

ಹಂದಿಗುಂದ, ನಂದಿಕುರಳಿ, ಬೆಂಡವಾಡ, ಹಾರೂಗೇರಿ, ಯಬರಟ್ಟಿ, ಶಿರಗೂರ, ಪರಮಾನಂದವಾಡಿ ಮುಂತಾದ ಕಡೆಗಳಲ್ಲಿ ಶೈವ ಪರಂಪರೆ ತೀವ್ರವಾಗಿ ಕಂಡುಬಂದಿದ್ದು, ರಾಯಬಾಗ ತಾಲೂಕಿನಲ್ಲಿ ಏಕೈಕ ವೀರಶೈವ ಮಠವೆಂದರೆ ಹಂದಿಗುಂದದ ಶ್ರೀ ಸಿದ್ಧೇಶ್ವರ ಮಠ. ಈ ಮಠದ ಸಾಂಸ್ಕೃತಿಕ ಮಹೋತ್ಸವ ಒಂದು ಮಹೋತ್ಸವಕ್ಕೆ ಸಮಾನವಾಗಿದೆ. ಶ್ರೀ ಮಠದ ಈಗಿನ ಪೀಠಾಧಿಕಾರಿಗಳು ಕವಿಗಳು, ಪ್ರವಚನಕಾರರ, ಆಧುನಿಕ ವಚನಕಾರರಾಗಿ ಈ ನಾಡಿನಲ್ಲಿ ಜನಪ್ರಿಯತೆಯನ್ನು ಪಡೆದಿದ್ದಾರೆ. ಮಠದಲ್ಲಿ ಶಿಕ್ಷಣ ದಾಸೋಹ, ನೊಂದು ಬಂದವರಿಗೆ ಆಶ್ರಯವನ್ನು ನೀಡಿದ್ದಾರೆ. ಹೀಗೆ ಶಿರಗೂರದ ಕಲ್ಮೇಶ್ವರ ಮಠ, ಪರಮಾನಂದವಾಡಿಯ ಶ್ರೀ ಗುರುದೇವಾಶ್ರಮ ಶೈವ ಸಂಪ್ರದಾಯದ ಇತರ ಮಠಗಳು, ದೈವತ್ವದ ಪರಂಪರೆಯ ಮಠಗಳಲ್ಲಿ ತತ್ವಪದಗಳನ್ನು, ಭಜನೆಗಳನ್ನು ಅವಧೂತ ಪರಂಪರೆಗೆ ಮುನ್ನಡೆಸಿವೆ. ಹಾರೂಗೇರಿ ಲೀಲಾ ಮಠ ಅವಧೂತ ಪರಂಪರೆಗೆ ಬಹುದೊಡ್ಡ ಉದಾಹರಣೆಯಾಗಿದೆ.

ಕೃಷ್ಣಾ ತೀರದ ಗ್ರಾಮಗಳಲ್ಲಿ ಜೈನರ ಸಂಖ್ಯೆ ಅಪಾರವಿದ್ದು, ಅಲ್ಲಿಯ ಬಸದಿಗಳು, ಜೀನ ಭಜನೆಗಳು, ಆಚರಣೆಗಳು ವಿಶಿಷ್ಟವಾಗಿವೆ. ರಾಯಬಾಗ, ನಸಲಾಪೂರ, ಹಾರೂಗೇರಿ, ಹಿಡಕಲ್, ಮುಗಳಖೋಡ ಜೀನ ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿದೆ. ರಾಯಬಾಗವು ಜೀನಧರ್ಮದ ಪ್ರಾಚೀನ ಕೇಂದ್ರವಾದ ಚಾರಿಕೀರ್ತಿ ಭಟ್ಟಾರಕನ ಶ್ರೀ ಲಕ್ಷ್ಮೀಸೇನ್ ಮಠವಿದೆ. ಇಲ್ಲಿ 10 ಮತ್ತು 11ನೇ ಶತಮಾನದ 2 ಪ್ರಾಚೀನ ಬಸದಿಗಳು ಕಂಡು ಬರುತ್ತವೆ. ಹೀಗೆ ಜೈನರು ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಹಿತ್ಯೀಕವಾಗಿ ಅಪಾರ ಕೊಡುಗೆಗಳನ್ನು ನೀಡಿದ್ದಾರೆ.

ಬಾಗೇ ಪ್ರಸಿದ್ಧ ಧಾರ್ಮಿಕ ಕೇಂದ್ರ. ಶೈವ, ವೈಷ್ಣವ, ಜೈನ್ ಮತಗಳ ಸಂಗಮ ಆದ್ದರಿಂದ ಇಲ್ಲಿನ ಶಾಸನಗಳು ಪ್ರಯಾಗ, ಪಡಗ, ತೆಂಕಲು ಬಾಗೇ ಎಂದು ಈ ನಾಡನ್ನು ಬಣ್ಣಿಸುತ್ತವೆ. ಇದೊಂದು ಘಟಿಕ ಸ್ಥಾನವಾಗಿದ್ದು, ಹಲವಾರು ವಿದ್ವಾಂಸರಿಗೆ ಆಶ್ರಯ ನೀಡಿದೆ. ಚಾಲುಕ್ಯರ ಎರಡನೇ ಜಗದೇಕ ಮಲ್ಲನ ಶಾಸನವೊಂದು ( . 1139) ಪೂವಿನ

ಬಾಗೇ ಕುಮಾರಕೀರ್ತಿ ಪಂಡಿತದೇವರನ್ನು ಉಲ್ಲೇಖಿಸುತ್ತದೆ. ಇಲ್ಲಿನ ಮಾರಸಿಂಗಶೆಟ್ಟಿಯ ಬಸದಿ ಶೂನ್ಯ ಸಂಸ್ಥಾನವಾಗಿತ್ತೆಂದು ತಿಳಿದು ಬರುತ್ತದೆ. ಜಗದೇಕ ಮಲ್ಲನದಂಡ ನಾಯಕ ಕಾಳಿಮ್ಮರಸ, ಆತನ ಹೆಂಡತಿ ರೇಖಲದೇವಿ, ಅವಳ ಸಹೋದರ ದಾಶಿರಾಜ ಈತ ಪೂವಿನ ಬಾಗೇಯ ಮಾರಸಿಂಗ್ ಶೆಟ್ಟಿಯ ಬಸದಿ ನೋಡಲು ಬಂದು ಕುಮಾರಕೀರ್ತಿ ಪಂಡಿತದೇವರಿಗೆ ಅಪಾರ ದಾನದತ್ತಿಗಳನ್ನು ನೀಡಿದನೆಂಬ ಉಲ್ಲೇಖ ಕಂಡು ಬರುತ್ತದೆ. ಅದೇ ಬಸದಿಯ ಮತ್ತೊಂದು ಗೋಡೆಯ ಮೇಲೆ ನಾಲ್ಕನೇ ಕಾತ್ಯೇಯ ವೀರನ ಶಾಸನವಿದ್ದು ಆದಿನಾಥ ಬಸದಿಗೆ ಚಿಂಚಲಿಯ ಗ್ರಾಮವನ್ನು ದಾನವಾಗಿ ನೀಡಿದ್ದ ಎಂಬ ಮಾಹಿತಿಯನ್ನು ಈ ಶಾಸನ ತಿಳಿಸುತ್ತದೆ.

ರಾಯಬಾಗ ನರಸಿಂಹ ದೇವಾಲಯ ದೇಶದಲ್ಲೇ ವಿಶಿಷ್ಟವಾಗಿರುವ ಗುಹಾಂತರ ದೇವಾಲಯವಾಗಿದೆ. ಅಲ್ಲಿನ ನರಸಿಂಹ ದೇವಾಲಯದ ಒಳಗಿರುವ ಮೂರ್ತಿ ಅತ್ಯಂತ ವಿಶಿಷ್ಟ ಮತ್ತು ಅನನ್ಯವಾದದ್ದು. ಇದೇ ರೀತಿ ಈ ನಾಡಿನಲ್ಲಿ ಸಾಕಷ್ಟು ವೈಷ್ಣವ ಪಂಥಕ್ಕೆ ಸೇರಿದ ದೇವಾಲಯಗಳಿವೆ. ವಿಜಯ ನಗರ ಕಾಲದಲ್ಲಿ ಈ ದೇವಾಲಯಗಳಿಗೆ ರಾಜ್ಯದ ರಕ್ಷಣೆ ಮತ್ತು ದಾನಧತ್ತಿಗಳು ದೊರಕಿದ್ದವು ಎಂಬುದು ಕಂಡು ಬರುತ್ತದೆ. ಇದೇ ರೀತಿ ಕುಡಚಿ ಮುಸ್ಲಿಮರಿಂದ ತುಂಬಿಕೊಂಡ ಪಟ್ಟಣ. ಕೃಷ್ಣಾ ತೀರದ ಕುಡಚಿಯಲ್ಲಿ ಮಾಸಾಬಿ ದರ್ಗಾವಿದ್ದು, ಮೊರಬ ಹಳ್ಳಿ ಮೊಹರಂಗೆ ಪ್ರಸಿದ್ಧವಾಗಿವೆ. ಈ ನಾಡಿನಲ್ಲಿ ಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಲ್ಲಿ ಮೊಹರಂ ಇದ್ದು, ಹಿಂದೂ-ಮುಸ್ಲಿಮರು ಒಗ್ಗಟ್ಟಿನಿಂದ ಮೊಹರಂ ಆಚರಿಸಿ ಕರ್ಬಲ್ ಹಾಡುಗಳನ್ನು ಹಾಡುತ್ತಾ ಈ ಜಾತ್ರೆಯನ್ನು ಮುನ್ನಡೆಸುವರು. ಈ ಹಾಡಿಗಾಗಿ ತಮ್ಮದೇ ಆದ ತಂಡಗಳನ್ನು ಕಟ್ಟಿಕೊಂಡು ಸ್ಪರ್ಧೆಯ ಮುಖಾಂತರ ಹಾಡುವರು. ಮುಸ್ಲಿಮರಲ್ಲಿ ವಿಶಿಷ್ಟವೆನಿಸುವ ಜಾತಿಗಾರರು ಅನೇಕ ಉದ್ಯೋಗಗಳನ್ನು ಮಾಡುತ್ತಿದ್ದು, ಅವರ ವೃತ್ತಿಯಲ್ಲಿ ಕಲಾವಿದರೆನಿಸಿಕೊಂಡಿದ್ದರು.

ಅನೇಕ ದಲಿತರ ಸಮುದಾಯಗಳು ಈ ನಾಡಿನಲ್ಲಿದ್ದು, ಕರ್ನಾಟಕದಲ್ಲೇ ಸುಶಿಕ್ಷಿತ ದಲಿತ ಬೆಳವಣಿಗೆಗೆ ಕಾರಣವಾಗಿದೆ. ಇವರು ಯಲ್ಲಮ್ಮ, ಮಾರಮ್ಮ, ದುರ್ಗವ್ವ, ಚಂದ್ರವ್ವ ಹೀಗೆ ಅನೇಕ ಸ್ತ್ರೀ ದೇವತೆಗಳ ಆರಾಧನೆಯನ್ನು ಇವರಲ್ಲಿ ಕಾಣುತ್ತೇವೆ. ಸ್ತ್ರೀ ದೇವತೆಯ ಆರಾಧನೆ ಇರುವುದರಿಂದ ಸ್ವತಂತ್ರ ಪೂರ್ವ ಮತ್ತು ಸ್ವತಂತ್ರ ನಂತರ ಕೆಲವು ವರ್ಷಗಳು ಅವರಿಗೆ ದೇವದಾಸಿ ಪದ್ಧತಿ ಈ ನಾಡಿನಲ್ಲಿ ಹೆಚ್ಚಾಗಿರುವುದು ಕಂಡು ಬರುತ್ತದೆ. ಇಲ್ಲಿನ ದಲಿತ ಸ್ತ್ರೀಯರು ಕೃಷ್ಣ ಪಾರಿಜಾತದ ನಟಿಯರಾಗಿ, ಲಾವಣಿ, ಚೌಡಕಿ ಹಾಡುಗಳಿಗೆ ಹೆಸರುವಾಸಿಯಾಗಿದ್ದಾರೆ. ಹೀಗೆ ದಲಿತರ ಬೆಳವಣಿಗೆಯಾದರೆ ಇತ್ತೀಚೆಗೆ ಬೆಳೆದು ಬಂದ ಮುಗಳಖೋಡ ಮಠ ಯಲ್ಲಪ್ಪ ಮಹಾರಾಜರು ಕಟ್ಟಿದ ಮಠ ಸರ್ವ ಸಮುದಾಯಗಳ ಆರಾಧನೆಯ ನೆಲೆಯಾಗಿದೆ. ಈ ಮಠವು ಸಮುದಾಯದ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದಿದೆ. ಕೋಳಿಗುಡ್ಡದ ಬೆಟ್ಟದಲ್ಲಿ ಆನಂದ ಆಶ್ರಮವಿದ್ದು, ಇತ್ತೀಚೆಗೆ ಕೇಂದ್ರ ಸರ್ಕಾರದ ಹಸ್ತದಿಂದ ಪ್ರವಾಸಿ ತಾಣವಾಗಿ ನಿರ್ಮಾಣಗೊಳ್ಳುತ್ತಿದೆ.

ಬಾಗೇನಾಡು ಈಗ ಹಚ್ಚ ಹಸುರಿನ ಬೀಡು. ಇಲ್ಲಿ ಎಂಟು ತಿಂಗಳು ಘಟಪ್ರಭಾ ಎಡದಂಡೆ ಕಾಲುವೆಯ ನೀರು ಹರಿದು ಪಶು ಸಂಗೋಪನೆ ಮತ್ತು ಕೃಷಿಗೆ ಹೆಚ್ಚಿನ ಸಮೃದ್ಧಿಯನ್ನು ಈ ನಾಡು ಪಡೆದುಕೊಂಡಿದೆ. ಕೃಷಿಯ ಫಲ ಕೈಗೆ ಬಂದ ನಂತರ ತಮ್ಮ ಮುಂದಿನ ದಿನಗಳನ್ನು ದೇವರಿಗಾಗಿ ಮೀಸಲಿಟ್ಟು ದರ್ಶನಕ್ಕೆಂದು ಪಾದಯಾತ್ರೆ ಕೈಗೊಳ್ಳುವರು. ಈ ನಾಡಿನಲ್ಲಿ ಸವದತ್ತಿಯ ಯಲ್ಲವ್ವನ ಆಚರಣೆ ವಿಶಿಷ್ಟವಾಗಿದ್ದು ಪ್ರತಿ ಊರಿನ ದೇವಾಲಯಗಳಿಂದ ಯಲ್ಲವ್ವನ ಜಗವನ್ನು ತೆಗೆದುಕೊಂಡು ಸವದತ್ತಿಯವರೆಗೆ ಪಾದಯಾತ್ರೆ

ಕೈಗೊಳ್ಳುವರು. ಜೊತೆಗೆ ಎತ್ತಿನಗಾಡಿ, ಟ್ರ್ಯಾಕ್ಟರ್‌ಗಳ ಮೂಲಕ ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಹೋಗುವರು. ಇಲ್ಲಿನ ಲಿಂಗಾಯತರು ಸರ್ವಧರ್ಮಿಯರೊಂದಿಗೆ ಶ್ರೀಶೈಲಕ್ಕೆ ಕಂಬಿ ಮಲ್ಲಯ್ಯನನ್ನು ತೆಗೆದುಕೊಂಡು ಪಾದಯಾತ್ರೆ ಹೋಗುವರು. ಹೋಗುವಾಗ ದಾರಿ ಸುಗಮವಾಗಲೆಂದು ಮಲ್ಲಯ್ಯನ ಭಜನೆಯನ್ನು ಮತ್ತು ಭಕ್ತಿಗೀತೆಗಳನ್ನು ಹಾಡುತ್ತಾ, ಕುಣಿಯುತ್ತಾ ಸಾಗುತ್ತಾರೆ. ಹೀಗೆ ಗುಡ್ಡಾಪುರದ ದಾನಮ್ಮ ಪಾದಯಾತ್ರೆ, ಕೊಲ್ಲಾಪುರದ ಮಹಾಲಕ್ಷ್ಮೀಗೆ ಪಾದಯಾತ್ರೆ, ಪಂಢರಾಪುರದ ವಿಠೋಬಾನ ಪಾದಯಾತ್ರೆ, ಮಾಯವ್ವನ ಪಾದಯಾತ್ರೆ ಹೀಗೆ ಪಾದಯಾತ್ರೆಯನ್ನು ಕೈಗೊಂಡು ಈ ನಾಡಿನಲ್ಲಿ ದೈವಿಭಕ್ತಿಯನ್ನು ಮೆರೆಯುವರು. ಕೇವಲ ಒಂದು ಜನಾಂಗಕ್ಕೆ ಸೀಮಿತವಾಗದೇ ಅನ್ಯೋನ್ಯತೆ ಮತ್ತು ಭಾವೈಕ್ಯತೆ ಮೆರೆಯುವರು.

ಈ ಪ್ರದೇಶದಲ್ಲಿ ವರ್ಷದುದ್ದಕ್ಕೂ ಉತ್ಸವಗಳು ಮಂಗಳವಾದ್ಯದ ನಿನಾದ ಇರುವುದರಿಂದ ಹಲವಾರು ಜನಪದ ಕಲೆಗಳು ಇಲ್ಲಿ ಜೀವಂತವಾಗಿವೆ. ಕಲೆಗೂ ಮತ್ತು ಸಮೃದ್ಧಿಗೂ ಬಿಡಿಸಲಾಗದ ನಂಟು ಈ ನಾಡಿನಲ್ಲಿದ್ದು, ಮದುವೆ, ಮುಂಜಿ, ಪ್ರಸ್ಥ, ಸೀಮಂತ ಇತ್ಯಾದಿ ಶುಭ ಪ್ರಸಂಗಗಳಲ್ಲಿ ಸಂಪ್ರದಾಯದ ಹಾಡು–ಹಬ್ಬಗಳನ್ನು ಆಚರಿಸುವರು. ಆರಾಧನೆ ಮತ್ತು ಮನರಂಜನೆಗಾಗಿ ವಿವಿಧ ಜನಪದ ಕಾರ್ಯಕ್ರಮಗಳನ್ನು ಸಂಘಟಿಸುವರು. ಜಾತ್ರೆ, ಉತ್ಸವಗಳಲ್ಲಿ ಕಲಾಮೇಳಗಳನ್ನು ಕೂಡಿಸುವರು.

ಹಾರೂಗೇರಿಯ ಲೀಲಾ ಮಠ ಮಹಾನವಮಿಯ ನಂತರ 5 ದಿನಗಳ ಕಾಲ ವೇದಾಂತ ಸಂಯೋಜಿಸುತ್ತದೆ. ಅದರಲ್ಲಿ ಒಂದು ದಿನ ಜನಪದ ಕಲಾಮೇಳಕ್ಕೆ ಆದ್ಯತೆ ನೀಡಿ ಕಲಾಮೇಳವನ್ನು ಪ್ರತಿನಿಧಿಸುತ್ತದೆ. ಈ ಭಾಗದಲ್ಲಿ ವಿವಿಧ ಜನಪದ ಕಲಾವಿದರು ಸೇರುತ್ತಿದ್ದು, ತಮ್ಮ ತಮ್ಮ ಕಲೆಗಳನ್ನು ಪ್ರದರ್ಶಿಸಿ ಬಹುಮಾನ–ಗೌರವಧನ ಪಡೆಯುತ್ತಾರೆ. ಕಳೆದ 25 ವರ್ಷಗಳಿಂದ ಇದು ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಹೀಗೆ ಕಲೆಯ ಪರಂಪರೆಗೆ ಇದೊಂದು ಅಭೂತಪೂರ್ವ ಸಾಕ್ಷಿಯಾಗಿದೆ. ಹಾರೂಗೇರಿಯ ಮುಸ್ಲಿಂ ಮತ್ತು ಹಿಂದೂ ಬಾಂದವರು ಮಹಮ್ಮದ ಪೈಗಂಬರನ ಜಯಂತ್ಯುತ್ಸವದಂದು ಮೊಹರಂ ಪದಗಳ ಸ್ಪರ್ಧೆ ಏರ್ಪಡಿಸಿ 20ಕ್ಕೂ ಹೆಚ್ಚು ಕರ್ಬಲ್ ತಂಡಗಳನ್ನು ಕೂಡಿಸಿ ರಾತ್ರಿಯಿಡಿ ಹಿಂದೂ–ಮುಸ್ಲಿಮರು ಕರ್ಬಲ್ ಹಾಡುಗಳನ್ನು ಕೇಳುತ್ತಾರೆ. ಅಂದಿನ ದಿನ ಅಲ್ಲಿನ ಮಸೀದಿಯ ಅಂಗಣ ಕರ್ಬಲ್ ಮೈದಾನವಾಗಿ ರೂಪಗೊಂಡಿರುತ್ತದೆ. ಇಂತಹ ಸ್ಪರ್ಧೆಗಳು ಮೊರಬ, ಅಳಗವಾಡಿ ಊರುಗಳಲ್ಲಿ ಜರುಗಿದ್ದು, ಮೊರಬದ ಮೊಹರಂ ಬಾಗೇ ನಾಡಿನ ಒಂದು ದೊಡ್ಡ ಜಾತ್ರೆಯಾಗಿದೆ.

ಇದೇ ರೀತಿ ಗೌರಿ–ಗಣಪತಿ ಹಬ್ಬ, ಹವ್ಯಾಸಿ ಕಲಾವಿದರು ಗ್ರಾಮಕ್ಕೊಂದರಂತೆ ನಾಟಕವಾಡುವುದು, ತತ್ವಪದಗಳನ್ನು ಹಾಡಿಸುವುದು, ಡೊಳ್ಳು ಪದಗಳನ್ನು ಹಾಡಿಸುವುದು, ಚೌಡಕಿ ಪದಗಳನ್ನು ಹಾಡಿಸುವುದು, ರಸಮಂಜರಿಗಳನ್ನು, ವಿವಿಧ ಕಲೆಗಳ ಪ್ರದರ್ಶನಗಳನ್ನು ಏರ್ಪಡಿಸುವುದು. ಇದರಲ್ಲಿ ಸ್ತ್ರೀ ಪಾತ್ರಧಾರಿ ಕಲಾವಿದೆಯರನ್ನು ಪಟ್ಟಣದಿಂದ ಕರೆಯಿಸಿಕೊಂಡು ಸ್ಥಳೀಯ ಜನರಿಗೆ ಹಾಸ್ಯಮಯ ಮಾತುಗಳಿಂದ ಮನರಂಜಿಸುವರು. ಇಂದಿಗೂ ಈ ನಾಡಿನಲ್ಲಿ ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ರಂಗಕಲೆಗಳು ಜೀವಂತವಾಗಿವೆ ಎಂಬುದಕ್ಕೆ ಈ ಪ್ರದರ್ಶನಗಳು ನಿದರ್ಶನವಾಗಿವೆ. 20 ವರ್ಷಗಳ ಹಿಂದೆ ಹಾರೂಗೇರಿ ಕ್ರಾಸ್‌ನಲ್ಲಿ ಒಂದು ವಿಶಾಲವಾಗಿರುವ ಒಂದು ಹುಣಸೆ ಮರವಿತ್ತು. ಆಗ ಅಲ್ಲಿ ಬಸ್ ನಿಲ್ದಾಣಗಳಿರಲಿಲ್ಲ. ಅದು ಜಮಖಂಡಿ, ಸಾಂಗ್ಲಿ, ಅಥಣಿ, ಗೋಕಾಕ ಸೇರಿಸುವ ರಾಜಮಾರ್ಗವಾಗಿತ್ತು. ಈ ಸ್ಥಳದಲ್ಲಿ ಜನರು ಹೆಚ್ಚಾಗಿ ಕೂಡುವುದರಿಂದ ಆ ಮರದ

ತುಂಬೆಲ್ಲಾ ನಾಟಕ ಕಂಪನಿಗಳ ಫಲಕಗಳು ನೇತಾಡುತ್ತಿದ್ದು, ಅದೊಂದು ಅಕ್ಷರದ ಮರವಾಗಿತ್ತು. ಈಗ ಆ ಮರವೂ ಇಲ್ಲ, ನಾಟಕ ಫಲಕಗಳು ಕಾಣುತ್ತಿಲ್ಲ. ಎಲ್ಲವೂ ಮುಂದುವರಿದಂತೆ ಮಾಯವಾಗುತ್ತಿವೆ. ಒಂದು ಕಾಲದಲ್ಲಿ ಹಿಡಕಲ್ ಜನಪದ ರಂಗಭೂಮಿಯ ತೊಟ್ಟಿಲು, ಅದು ರಂಗಕಲಾವಿದರ ತವರೂರು. ಈಗಲೂ ಇಲ್ಲಿ ಪಾರಿಜಾತ ನಾಟಕ ಕಂಪನಿಗಳಿವೆ. ಹಲವಾರು ಹವ್ಯಾಸಿ ನಾಟಕ ತಂಡಗಳಿವೆ. ಮುಖಕ್ಕೆ ಬಣ್ಣ ಬಳಿದುಕೊಳ್ಳುವುದೆಂದರೆ ಹಿಡಕಲ್ ಜನರಿಗೆ ಎಲ್ಲಿಲ್ಲದ ಖುಷಿ.

ಬಾಗೇನಾಡಿನ ತುಂಬೆಲ್ಲಾ ಸಾಂಸ್ಕೃತಿಕವಾಗಿ ಸ್ಪರ್ಧೆಗಳಿಗೆ ಕಡಿಮೆ ಇಲ್ಲದಂತೆ ಇಲ್ಲಿ ಕಂಡುಬರುತ್ತದೆ. ವಿಶೇಷವೆಂದರೆ ದಟ್ಟಿ ಕುಣಿತ, ಜೊತೆಗೆ ವಾದ್ಯಗಳ ಕುಣಿತ, ತಾಸೆ, ಹಲಗೆ ಕುಣಿತ, ದಮಡಿ ಕುಣಿತ, ಕರಡಿ ಕುಣಿತ, ಕೈಪಟ್ಟು ಕುಣಿತ, ಲೇಜಿಯಮ್ ಕುಣಿತ, ಝಾಂಜ್ ಮೇಳಗಳು ವಿಶೇಷವಾಗಿ ಕಂಡು ಬರುತ್ತದೆ. ಜೊತೆಗೆ ಮದುವೆಯ ಸಂದರ್ಭದಲ್ಲಿ ಬ್ಯಾಂಜೋ ಮೇಳದ ಹಾಡು-ಕುಣಿತ ಇಲ್ಲಿ ವಿಶೇಷವಾಗಿರುವಂತಹ ಕಲೆಯಾಗಿದೆ. ಇತ್ತೀಚೆಗೆ ಡಿ.ಜೆ ಕುಣಿತ ಪ್ರವೃತ್ತಿಯು ಆವರಿಸುತ್ತಿದೆ. ಜಾತ್ರೆಗಳು ಕಲಾ ಆರಾಧನೆಯ ಸಾಂಸ್ಕೃತಿಕ ಸಮ್ಮೇಳನಗಳಾದರೆ, ಇಲ್ಲಿನ ಶಿವಾಲಯಗಳಲ್ಲಿ ಶಿವಭಜನೆ, ಜಿನಾಲಯದಲ್ಲಿ ಜೀನ್ ಭಜನೆ, ವಿಠ್ಠಲ ಮಂದಿರಗಳಲ್ಲಿ ಅಭಂಗ ಗಾಯನಗಳು ನಿರಂತರವಾಗಿ ಜರುಗುತ್ತವೆ. ಹಿಡಕಲ್ ಗ್ರಾಮದ ಮಣ್ಣಿಕೇರಿ ತೋಟದಲ್ಲಿ ಮಹಾನವಮಿ ಉತ್ಸವ ವಿಜೃಂಭಣೆಯಿಂದ ಜರುಗುತ್ತದೆ. ಹಾರೂಗೇರಿಯ ಸುತ್ತಮುತ್ತಲೂ ವಾರಕರಿ ಪಂಥದ ಪ್ರಭಾವ ದಟ್ಟವಾಗುತ್ತಿದೆ. ಇಟ್ನಾಳ ಗ್ರಾಮದಲ್ಲಿ ಭಂಡಿಗಣಿ ದೇವರ ಪ್ರಭಾವದಿಂದ ಭಕ್ತಿ ದಾಸೋಹ ಮೂಡುತ್ತಿದೆ. ಈ ಜಾತ್ರೆಗಳು-ಉತ್ಸವಗಳು ಜನರಲ್ಲಿ ಯಾವುದೇ ಧರ್ಮ, ಜನಾಂಗ ಬೇಧವಿಲ್ಲದೇ ಸಮಾಜದಲ್ಲಿ ಜೀವಿಸುತ್ತಿದ್ದಾರೆ ಎಂಬುದನ್ನು ತೋರಿಸುತ್ತವೆ.

ಬಾಗೇನಾಡಿನ ಜನಪದ ಕಲೆಗಳ ಅಭಿವೃದ್ಧಿಗೆ ಈ ಪರಿಸರ ವಿಪುಲವಾದ ಜನಪದ ಸಾಹಿತ್ಯಕ್ಕೆ ಕಾರಣವಾಗಿದೆ. ಶಿಷ್ಟ ಸಾಹಿತ್ಯ ಬಡವಾಗಿದ್ದರೂ ಜನಪದ ಸಾಹಿತ್ಯದ ಚರಿತ್ರೆ ಬಹುಳ್ಯವಾಗಿದೆ. ಕವಿ ರಾಜಾಧಿತ್ಯನ ಇತಿಹಾಸ ಹೊಂದಿರುವ ಈ ನಾಡು ಗಣಿತದ ಭಾಸ್ಕರನೇ ಈ ನಾಡಿನ ಪ್ರಥಮ ಕವಿ. 19ನೇ ಶತಮಾನದ ಮಧ್ಯ ಭಾಗದಲ್ಲಿ ಅನೇಕ ಜನಪದ ಸಾಹಿತ್ಯ ಬೆಳಕಿಗೆ ಬಂದವು. ಅಲಬೈರಿ ಮತ್ತು ಶಿರಗೂರಿನ ಕಲ್ಮೇಶ್ವರ ಅವರ ಸಾಹಿತ್ಯಗಳು ಇಲ್ಲಿ ಬೆಳಕಿಗೆ ಬಂದಿವೆ. ಜೊತೆಗೆ ಇಲ್ಲಿನ ಇನ್ನಿತರ ಕವಿಗಳೆಂದರೆ ಜಲಾಲಪೂರದ ಕವಿ ರಾಚೋಟಿ, ಪರಮಾನಂದವಾಡಿಯ ಮೀರಸಾಬ ಮುಲ್ಲಾ, ದಿಗ್ಗೇವಾಡಿಯ ಬಾಬಾಜಿ ಜಮಾದಾರ, ಮುಗಳಖೋಡ ರಾಚಯ್ಯ ಹಿರೇಮಠ, ನಿಡಗುಂದಿಯ ಯಮನಪ್ಪ ಛಲವಾದಿ, ಹಿಡಕಲದ ರಾನಬಾ ಕದಂ, ಸೌದತ್ತಿಯ ಸಿದ್ದಪ್ಪ, ಶಿರಗೂರಿನ ಸಿದ್ದಲಿಂಗ ವಸ್ತಾದ, ಹಾರೂಗೇರಿಯ ರಾಮು ಸುಬಣ್ಣವರ, ಆಲಖನೂರಿನ ರಾಮು ಪೂಜೇರಿ, ದಿಗ್ಗೇವಾಡಿಯ ಬಾಬಾಜಿ ಜನಾಜ, ನಿಡಗುಂದಿಯ ಶರಣಗೌಡ, ಕುಡಚಿಯ ಶೆಟ್ಟಿ ಭೈರಿ, ಚಿಂಚಲಿಯ ಶಂಕರದಾಸ. ಇಲ್ಲಿನ ಅನೇಕ ಕವಿಗಳ ಆಶ್ರಯತಾಣ ಈ ನಾಡಾಗಿದೆ. ಇವರೆಲ್ಲರೂ ಕಲಾ ಪರಂಪರೆಯ ಸಾಂಸ್ಕೃತಿಕ ಸೆಲೆಯಾಗಿದ್ದಾರೆ.

ವೃತ್ತಿ ಕಲೆಗಳಲ್ಲಿ ಆರಾಧನೆ ಮತ್ತು ಆಚರಣೆಗಳ ಕ್ರಿಯೆಗಳ ವಿಕಸನ ಹೊಂದಿ ಪೂರ್ಣ ಸ್ವರೂಪದ ಕಲೆಗಳಾಗಿದ್ದು, ಒಂದು ಬಗೆ. ಆದರೆ ಧರ್ಮ, ಪಂಥ ಪ್ರಚಾರಕ್ಕಾಗಿ ಹುಟ್ಟಿದ ಕಲೆಗಳ, ಸಂತರ ಧರ್ಮ ಅಥವಾ ಪಂಥದ ಉದ್ದೇಶ ಮೀರಿ ಸಾರ್ವಜನಿಕ ಕಲೆ ಆದದ್ದು ಇನ್ನೊಂದು ಬಗೆ. ಬಡಿಗ, ಕಮ್ಮಾರ, ಕುಂಬಾರ, ಕಂಚಕಾರ, ಪತ್ತಾರ, ಮೇದಾರ, ಚಮ್ಮಾರ, ಸಿಂಪಿ ಮೊದಲಾದವರು ವೃತ್ತಿ ಕಲಾವಿದರು. ಇವರನ್ನು ಕುಶಲಕಲೆಗಾರರು ಎಂದು

ಕರೆಯಬಹುದು. ಜೊತೆಗೆ ಕೊರವರು, ಶಹನಾಯಿ ವಾದಕರು, ಗೊರವರು, ದುರ್ಗ ಮುರ್ಗೇಯರು, ಡೊಂಬರು, ಕಸರತ್ತು ಪ್ರದರ್ಶಕರು, ಜಾತಗಾರರು, ಸೋಗು ಹಾಕುವವರು, ಬಹುರೂಪಿಗಳು, ರಂಗಕಲಾವಿದರು ಇಂತಹ ಅನೇಕ ವೃತ್ತಿ ಕಲಾವಿದರನ್ನು ಬಾಗೇನಾಡಿನಲ್ಲಿ ಕಾಣಬಹುದು. ಧರ್ಮ, ಆರಾಧನೆ ಮತ್ತು ವೃತ್ತಿ ಕಲೆಗಳನ್ನು ಹೊರತು ಪಡಿಸಿ ಹವ್ಯಾಸವಾಗಿ ರೂಢಿಸಿಕೊಂಡ ಅನೇಕ ಕಲಾವಿದರು ಇಲ್ಲಿ ಕಾಣಬಹುದು. ಪೇಟೆ ಬಾರಿಸುವುದು, ವೀಣೆ ನುಡಿಸುವುದು, ಡೊಳ್ಳು ಬಡಿಯುವುದು, ಬ್ಯಾಂಡ್ ಬಾರಿಸುವುದು ಮುಂತಾದ ಕಲೆಗಳು ಹವ್ಯಾಸಿ ಕಲೆಗಳಾಗಿವೆ. ಜೊತೆಗೆ ಹವ್ಯಾಸಮಯವಾಗಿ ನಾಟಕ, ಸಂಗೀತ, ನೃತ್ಯ, ಹಾವಾಡಿಗರು, ಕುಸ್ತಿ ಪಟುಗಳು ಇವು ಪ್ರದರ್ಶನ ಕಲೆಗಳಾಗಿವೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾಗಿದ್ದರು.

ಇಲ್ಲಿನ ಸ್ಮಾರಕಗಳು ಪರಂಪರೆಯ ಭಾವೈಕ್ಯತೆಯನ್ನು ಮೂಡಿಸುವಲ್ಲಿ ಪ್ರತೀಕವಾಗಿವೆ. ರಾಯಬಾಗ ಕೋಟೆ, ಆಲಖನೂರಿನ ದೇವಸ್ಥಾನ, ಚಿಂಚಲಿಯ ದೇವಸ್ಥಾನ, ಬೆಟ್ಟ ಕೋಟೆಗಳು ಹೀಗೆ ಹಲವಾರು ಸ್ಮಾರಕಗಳು ಈ ನಾಡಿನಲ್ಲಿ ಸಾಂಸ್ಕೃತಿಕ ಪ್ರತಿಬಿಂಬವಾಗಿ ಮೂಡಿವೆ. ರಾಯಬಾಗ ಕೋಟೆ ಮರಾಠರ 2ನೇ ರಾಜಧಾನಿಯಾಗಿದ್ದು, ಶಿವಾಜಿಯ ಕಾಲಕ್ಕೆ ಈ ಕೋಟೆಯನ್ನು ಆಕ್ರಮಿಸಲಾಗಿತ್ತು. ಶಾಹು ಮಹಾರಾಜರು ಈ ಕೋಟೆಯ ಮೂಲಕ ಬೆಳಗಾವಿಯ ಅನೇಕ ಭಾಗಗಳನ್ನು ಆಳಿದರು. ಈ ನಾಡಿನಲ್ಲಿ ರಾಷ್ಟ್ರಕೂಟರ ಶಾಸನಗಳು, ವೀರಗಲ್ಲುಗಳು, ಸತಿಗಲ್ಲುಗಳು ಅನೇಕ ಸಿಗುತ್ತವೆ. ಕೂಹುಂಡಿ ನಾಡಿನ ಭಾಗವಾಗಿ ಸವದತ್ತಿಯ ರಟ್ಟರು, ಕಲ್ಯಾಣದ ಚಾಲುಕ್ಯರು, ದೇವಗಿರಿಯ ಯಾದವರು, ವಿಜಯ ನಗರ ಮತ್ತು ಬಿಜಾಪುರದ ಆದಿಲ್‌ಶಾಹಿಗಳು, ಮರಾಠರು, ಬ್ರಿಟಿಷರ ಕಾಲದಲ್ಲಿ ಬಾಂಬೆ ಪ್ರೆಸಿಡೆನ್ಸಿಗೆ ಒಳಗಾಗಿತ್ತು.

ಭಾಷೆ ಪರಂಪರೆಯನ್ನು ನೋಡಿದರೆ ಮಧ್ಯ ಯುಗದಿಂದ ಇಲ್ಲಿ ಅನೇಕ ರಾಜಮನೆತನಗಳು ಆಳಿದರು ಕನ್ನಡತ್ವವು ಈ ಮಣ್ಣಿನಲ್ಲಿ ಹುದುಗಿದೆ. ಬಹುಮನಿ ಸುಲ್ತಾನರು, ಬಿಜಾಪುರದ ಆದಿಲ್‌ಶಾಹಿಗಳು, ಮರಾಠರು ಹೀಗೆ ಅನೇಕ ಅನ್ಯ ಭಾಷಿಗರು ಆಳಿದರು ಇಲ್ಲಿನ ಕನ್ನಡಕ್ಕೆ ಏನು ಮುಪ್ಪಾಗಿಲ್ಲ. 12ನೇ ಶತಮಾನದ ವಚನ ಸಾಹಿತ್ಯದ ಪ್ರಭಾವ ಇವತ್ತಿನವರೆಗೂ ಎದ್ದು ಕಾಣುತ್ತಿದೆ. ಇತ್ತೀಚೆಗೆ ಇಲ್ಲಿನ ಕನ್ನಡ ಸಂಘಟನೆಗಳು ಕನ್ನಡಾಭಿಮಾನವನ್ನು ಹೆಚ್ಚಿಸುತ್ತಿದೆ.

**ಉಪಸಂಹಾರ**

ಬಾಗೇನಾಡು ಎಂಬುವುದು ಜಾತ್ಯಾತೀತ ಹಾಗೂ ಧಾರ್ಮಿಕ ಸಮನ್ವಯತೆಯ ನಾಡಾಗಿದ್ದು, ಇಲ್ಲಿನ ಜನ ಒಡಹುಟ್ಟಿದವರಂತೆ, ಒಂದೇ ಕುಟುಂಬದಂತೆ ಬದುಕುತ್ತಿದ್ದಾರೆ. ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ಈ ನಾಡಿನ ಕೀರ್ತಿ ಇಲ್ಲಿ ನೆಲೆ ನಿಂತಿದ್ದು, ಹಲವಾರು ಯುವ ಕವಿ ಮನಸ್ಸುಗಳಿಗೆ ಈ ನಾಡು ಸ್ಪೂರ್ತಿಯಾಗಿದೆ. ತನ್ನದೇ ಆದ ಸಂಸ್ಕೃತಿಕ ಚರಿತ್ರೆಯನ್ನು ಉಳಿಸಿ–ಬೆಳೆಸುವುದಕ್ಕೆ ಈ ನಾಡು ತವರಾಗಿದೆ. ಒಟ್ಟಾರೆಯಾಗಿ ಈ ನಾಡು, ಇಲ್ಲಿನ ಜನ, ಇಲ್ಲಿನ ಸಂಸ್ಕೃತಿ, ಸಾಂಸ್ಕೃತಿಕ ಪರಂಪರೆಯಾಗಿ ಉತ್ಕೃಷ್ಟ ಮಟ್ಟದಲ್ಲಿದ್ದು, ನಾಡು–ನುಡಿಗಾಗಿ ಇಲ್ಲಿನ ಜನ ಶ್ರಮಿಸುತ್ತಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಕೊಕಟನೂರ ಶೋಭಾ., ಬಾಗೇನಾಡಿನ ಸಾಹಿತ್ಯ
2. ಹುಲ್ಲೋಳ್ಳಿ ಸಿದ್ದು., ಬಾಗೇನಾಡಿನ ಜನಪದಗಳು
3. ವಂಟಗೂಡಿ ಟಿ.ಎಸ್., ಬಾಗೇನಾಡಿ ಹಾಲುಮತದ ದೇಗುಲಗಳು
4. ಕೊಕಟನೂರ ರವಿ., ಕೂಹುಂಡಿ ನಾಡಿನ ಶಾಸನಗಳು
5. ಜಂಬಗಿ ಬಿ.ಎ., ಕವನ ಸಂಕಲನಗಳು
6. ಮಾಳಿ ವಿ.ಎ., ವಿಮರ್ಶಾತ್ಮಕ ಗ್ರಂಥಗಳು

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.